**ಪಿಡಬ್ಲ್ಯೂ.1: ಶ್ರೀ. ಟಿ.ಎಸ್. ಚಂದ್ರಶೇಖರ್.,**

**ದಿನಾಂಕಃ 08.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಪಿರ್ಯಾದುದಾರರು ನನ್ನ ಅಣ್ಣ. ಪಿರ್ಯಾದುದಾರರು ಹಾಗೂ ಆರೋಪಿಯ ನಡುವೆ ಆದಂತಹ ವ್ಯವಹಾರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುತ್ತದೆ. ಪಿರ್ಯಾದುದಾರರು ನ್ಯಾಯಾಲಯಕ್ಕೆ ಹಾಜರಾಗಲು ತೊಂದರೆಯೇ ಎಂದರೆ ಅವರು ಇಂಗ್ಲೆಂಡ್ ನಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರು ಮತ್ತು ಆರೋಪಿಯ ನಡುವೆ ಆದ ವ್ಯವಹಾರದ ಬಗ್ಗೆ ಪಿರ್ಯಾದುದಾರರಿಗೆ ತಿಳಿದಿರುತ್ತದೆ ಎಂದರೆ ಸರಿ. ಆರೋಪಿಯು ಮೆ. ಆರ್.ಎಸ್. ಡೆವಲಪರ್ಸ್ ನ ಪಾಲುದಾರರು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಪಿರ್ಯಾದಿನ ಕಲಂ 'ಬಿ' ನಲ್ಲಿ ನಮೂದಿಸಿರುವ ಸ್ವತ್ತಿನ ಡೆವಲಪರ್ ಆಗಿದ್ದರು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

**2.** ಅಪಾರ್ಟ್‌ಮೆಂಟ್ ನಂ.201 ರ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಆರೋಪಿ ಬರೆದುಕೊಟ್ಟಂತಹ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಜಿ.ಎಸ್. ಶ್ರೀನಿವಾಸ್ ಹಾಗೂ ಜಿ.ಎಸ್. ಗೋವಿಂದರಾಜು ಮತ್ತು ಜಿ.ಎಸ್. ರಾಘವೇಂದ್ರ ಗುಪ್ತ ರವರು ಮಾಲೀಕರಾಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಿ.05.08.2022 ರ ಕರಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಅದರ ಬಗ್ಗೆ ನಮ್ಮ ವಕೀಲರಿಗೆ ನೀಡಿರುತ್ತೇನೆ, ಅದನ್ನು ನ್ಯಾಯಾಲಯಕ್ಕೆ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಅಗ್ರಿಮೆಂಟಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸದರಿ ಅಗ್ರಿಮೆಂಟಿನಂತೆ ಅಪಾರ್ಟ್‌ಮೆಂಟ್ ನಂ.201 ಕ್ಕೆ ಒಟ್ಟು 63 ಲಕ್ಷ ರೂ. ನಿಗದಿಯಾಗಿತ್ತು. ಆ ಕರಾರಿನಂತೆ

ಪಿರ್ಯಾದುದಾರರು ಆರೋಪಿಗೆ 63 ಲಕ್ಷ ರೂ.ಗಳನ್ನು ನೀಡಬೇಕಾಗಿತ್ತು. ಆರೋಪಿಗೆ 40 ಲಕ್ಷ ರೂ.ಗಳನ್ನು ಚೆಕ್ಕು ಮುಖಾಂತರ, 10 ಲಕ್ಷ ರೂ.ಗಳನ್ನು ನಗದು ಮುಖಾಂತರ ನೀಡಿದ್ದು ಮತ್ತು ಉಳಿಕೆ 13 ಲಕ್ಷ ರೂ.ಗಳನ್ನು ಪ್ರಾಜೆಕ್ಟ್ ಮುಕ್ತಾಯಗೊಂಡ ನಂತರ ನೀಡುವುದಾಗಿ ಅಗ್ರಿಮೆಂಟ್ ಆಗಿತ್ತು. ಉಳಿಕೆ 13 ಲಕ್ಷ ರೂ.ಗಳನ್ನು ನೊಂದಣಿ ದಿನಾಂಕದಂದು ನೀಡುವುದು ಎಂದು ಕರಾರು ಆಗಿತ್ತು, ಆರೋಪಿಯು ನೊಂದಣಿ ಮಾಡಿಕೊಳ್ಳದ ಕಾರಣ ಉಳಿಕೆ 13 ಲಕ್ಷ ರೂ.ಗಳನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ 40 ಲಕ್ಷ ರೂ.ಗಳನ್ನು ಚೆಕ್ಕು ಮುಖಾಂತರ ನೀಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

**3.** 90 ದಿನಗಳ ಒಳಗಾಗಿ ಆರೋಪಿಯು ಅಪಾರ್ಟ್ಮೆಂಟ್ ನಂ.201 ಅನ್ನು ನೊಂದಣಿ ಮಾಡಿಕೊಡದ ಕಾರಣ ಪಿರ್ಯಾದುದಾರರು ನೋಟೀಸು ನೀಡಿದ್ದಾರೆಯೇ ಎಂದರೆ ಸಾಕ್ಷಿಯು ಆರೋಪಿಯು ಅಗ್ರಿಮೆಂಟನ್ನು ನವೀಕರಣಗೊಳಿಸಿಕೊಂಡ ಕಾರಣ ಆ ರೀತಿ ನೋಟೀಸು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಅಗ್ರಿಮೆಂಟನ್ನು ನವೀಕರಣಗೊಳಿಸಿಕೊಟ್ಟಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ನಮ್ಮ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ಕ್ರಯದ ಕರಾರನ್ನು ನೊಂದಣಿ ಮಾಡಿಸಿಕೊಡದ ಕಾರಣ ಅವರ ವಿರುದ್ದ ಸಿವಿಲ್ ದಾವೆ ಹೂಡಿದ್ದೀರಾ ಎಂದರೆ ಯಾವುದೇ ಸಿವಿಲ್ ದಾವೆ ಹೂಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಿವಿಲ್ ದಾವೆ ಹೂಡಲು ತೊಂದರೆ ಇತ್ತೆ ಎಂದರೆ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ.

**4.** ನಿಮ್ಮ ಪಿರ್ಯಾದಿನಲ್ಲಿ ಫ್ಲಾಟ್ ಪೂರ್ಣಗೊಂಡಿರಲಿಲ್ಲ ಎಂದು ತಿಳಿಸಿದ್ದೀರಿ ಅದಕ್ಕೆ ಸಂಬಂಧಿಸಿದಂತೆ ಆರೋಪಿಗೆ ನೋಟೀಸು ನೀಡಿದ್ದೀರಾ ಎಂದರೆ ಸಾಕ್ಷಿಯು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಅದಕ್ಕೆ ಸಂಬಂಧಿಸಿದಂತೆ ಆರೋಪಿ ಅಗ್ರಿಮೆಂಟನ್ನು ನವೀಕರಣಗೊಳಿಸಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಈ ದಿನಕ್ಕೆ ಫ್ಲಾಟ್

ಕಂಪ್ಲೀಟ್ ಆಗಿದ್ದು ಬೇರೆಯವರು ಒಂದು ಒಂದೂವರೆ ವರ್ಷದಿಂದ ಸ್ವಾಧೀನದಲ್ಲಿದಲ್ಲಿದ್ದಾರೆ ಎಂದು ನುಡಿಯುತ್ತಾರೆ. ನೀವು ಪಿರ್ಯಾದಿನಲ್ಲಿ ಹೇಳಿರುವಂತಹ indenture ಅನ್ನು ಹಾಜರುಪಡಿಸಿದ್ದೀರಾ ಎಂದರೆ ನಮ್ಮ ವಕೀಲರಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ವಕೀಲರು ಯಾವ ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಅಗ್ರಿಮೆಂಟ್ ಮತ್ತು indenture ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಅದನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ ಅವಶ್ಯಕತೆ ಇದ್ದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರು ಆರೋಪಿಗೆ ಯಾವುದೇ ರೀತಿ ಸಾಲ ನೀಡಿರುವುದಿಲ್ಲ.

**5.** ನಿ.ಪಿ.2 ರಿಂದ 4 ರ ಚೆಕ್ಕುಗಳು ಆರ್.ಎಸ್. ಡೆವಲಪರ್ಸ್ ಗೆ ಸಂಬಂಧಪಟ್ಟಿವೆಯೇ ಎಂದರೆ ಸಾಕ್ಷಿಯು ಸಂಬಂಧಪಟ್ಟಿರುತ್ತದೆ ಎಂದು ನುಡಿಯುತ್ತಾರೆ. ಆರ್.ಎಸ್. ಡೆವಲಪರ್ಸ್ Partnership firm ಅನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿ ಅವರಿಗೆ ನೋಟೀಸು ನೀಡಿದ್ದೀರಾ ಎಂದರೆ ಸಾಕ್ಷಿಯು ಆರೋಪಿಯ ಮುಖಾಂತರ ವ್ಯವಹಾರ ಮಾಡಿರುವ ಕಾರಣ ಆರೋಪಿಯನ್ನು ಪಕ್ಷಕಾರರನ್ನಾಗಿ ಮಾಡಿರುತ್ತೇವೆ, ಹಾಗೆಯೇ ಆರ್.ಎಸ್. ಡೆವಲಪರ್ಸ್ ಗೆ ನೋಟೀಸು ನೀಡಿರುತ್ತೇವೆ. ಆರೋಪಿಯು ದಿನಾಂಕವನ್ನು ನಮೂದಿಸದೆ ಚೆಕ್ಕು ನೀಡಿದ್ದರು ಎಂದು ನಿಮ್ಮ ಪಿರ್ಯಾದಿನಲ್ಲಿ ನಮೂದಿಸಿರುತ್ತೀರಿ ಎಂದರೆ ಸರಿ. ಆರೋಪಿಯು ಫೋನ್ ಮುಖಾಂತರ ತಿಳಿಸಿದ ಕಾರಣ ಪಿರ್ಯಾದುದಾರರಾದ ಬಾಲಾಜಿ ಪ್ರಸಾದ್ ರವರು ವಿವಾದಿತ ಚೆಕ್ಕಿನಲ್ಲಿ ದಿನಾಂಕವನ್ನು ನಮೂದಿಸಿದರು. ಪಿರ್ಯಾದುದಾರರು ಯಾವ ದಿನಾಂಕದಂದು ಯಾವ ಮೊಬೈಲ್ ಸಂಖ್ಯೆಯ ಮುಖಾಂತರ ಆರೋಪಿಯ ಜೊತೆ ಮಾತನಾಡಿ ಅವರ ಕೋರಿಕೆಯ ಮೇರೆಗೆ ವಿವಾದಿತ ಚೆಕ್ಕಿನಲ್ಲಿ ದಿನಾಂಕವನ್ನು ನಮೂದಿಸಿದ್ದರು ಎಂದು ನನಗೆ ನಿರ್ದಿಷ್ಟ ದಿನಾಂಕ

**ಪಿಡಬ್ಲ್ಯೂ.1: ಶ್ರೀ. ಟಿ.ಎಸ್. ಚಂದ್ರಶೇಖರ್.,**

ಹಾಗೂ ಮೊಬೈಲ್ ಸಂಖ್ಯೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಚೆಕ್ಕಿನಲ್ಲಿ ನಮೂದಿಸಿರುವ ದಿನಾಂಕದಿಂದ 10 ದಿನಗಳ ಮುಂಚೆ ಆರೋಪಿ ಪೋನಿನಲ್ಲಿ ಮಾತನಾಡಿ ನನ್ನನ್ನು ಕೇಳುವ ಅವಶ್ಯಕತೆ ಇಲ್ಲ ನೀವು ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿಕೊಳ್ಳಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ವಿವಾದಿತ ಚೆಕ್ಕನ್ನು ಆರೋಪಿ ನಿಮ್ಮ ಅಣ್ಣನಿಗೆ ಯಾವಾಗ ನೀಡಿದ್ದರು ಎಂದರೆ ಸಾಕ್ಷಿಯು ನಿರ್ದಿಷ್ಟ ದಿನಾಂಕ ನನಗೆ ತಿಳಿದಿರುವುದಿಲ್ಲ, ಅಗ್ರಿಮೆಂಟನ್ನು ನವೀಕರಣಗೊಳಿಸಿಕೊಂಡಿರುವಾಗ ಅಂದಾಜು 2020, 2022 ರಲ್ಲಿ ನೀಡಿರಬಹುದು ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.